ಅ) ಕೆ ಜಿ ಎಫ್ ಪಟ್ಟಣದ ಉರಿಗಾಂ ಪೇಟೆಯಲ್ಲಿದ್ದ ಕುಡಿಯುವ ನೀರಿನ ಜಲಸಂಗ್ರಹಾಗಾರವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೆಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಜಲಸಂಗ್ರಹಾಗಾರವನ್ನು ಯಾವಾಗ ಕೆಡವಲಾಯಿತು,

ಇ) ಮೇಲ್ಕಟ್ಟದ ಜಲಸಂಗ್ರಹಾಗಾರವನ್ನು ಪುನರ್ ನಿರ್ಮಾಣ ಮಾಡಲು ಕೈಗೊಂಡ ಕ್ರಮವೇನು,

ಈ) ವಿಳಂಬವಾಗಲು ಕಾರಣಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) 2006ರ ಏಪ್ರಿಲ್ 24 ರಂದು ಕೆಡವಲಾಗಿದೆ

ಇ) ಕೆ ಜಿ ಎಫ್ ಪಟ್ಟಣದ ಉರಿಗಾಂ ಪೇಟೆ ಪ್ರದೇಶದಲ್ಲಿ ಮೇಲ್ಕಟ್ಟದ ಜಲಸಂಗ್ರಹಾಗಾರವನ್ನು ಪುನರ್ ನಿರ್ಮಿಸುವ ಹಾಗೂ ಕೊಳವೆ ಮಾರ್ಗ ಅಳವಡಿಸುವ ರೂ.50 00 ಲಕ್ಷಗಳ ಅಂದಾಜು ವೆಚ್ಚಕ್ಕೆ ಸರ್ಕಾರವು ಆದೇಶ ಸಂಖ್ಯೆ ನಅಇ 59 ಯುಡಬ್ಲ್ಯೂಎಸ್ 2006, ದಿನಾಂಕ 17–10–2006 ರಲ್ಲಿ ಆಡಳಿತಾತ್ಮ ಮಂಜೂರಾತಿ ನೀಡಿದೆ ಈ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ 16 9 2006 ರಂದು ಹಾಗೂ 8 12 2006 ರಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು ಆದರೆ ಈ ಎರಡೂ ಟೆಂಡರ್ ಕರೆಗಳಿಗೆ ಸೂಕ್ತ ಪ್ರತಿಕ್ರಿಯೆ ಬಂದಿರುವುದಿಲ್ಲ ಮೂರನೇ ಕರೆ ಟೆಂಡರನ್ನು ಶೀಘ್ರದಲ್ಲೇ ಆಹ್ವಾನಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಮೇಲೆ ಹೇಳಿದಂತೆ

1504 (1775) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) – ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ಬಳಿ ನಿರ್ಮಿಸುತ್ತಿರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ಸರ್ಕಾರಿ ಜಮೀನನ್ನು ಹರಾಜು ಮಾಡಲು ಸರ್ಕಾರ ನಿರ್ಧರಿಸಿದೆಯೇ,

ಆ) ಹಾಗಿದ್ದಲ್ಲಿ, ಎಷ್ಟು ಎಕರೆ ಜಾಗವನ್ನು ಹರಾಜು ಮಾಡಲಾಗುವುದು,

ಇ) ವಿಮಾನ ನಿಲ್ದಾಣದ ವಿಸ್ತರಣೆ ಯೋಜನೆಗೆ ಈ ಜಮೀನು ಬೇಕಾಗುವುದಿಲ್ಲವೇ,

ಈ) ಉದ್ದೇಶಿತ ಏರೋಸ್ಪೇಸ್ ಯೋಜನೆಗೆ ಈ ಜಮೀನನ್ನು ಉಪಯೋಗಿಸದೇ ಇರಲು ಕಾರಣಗಳೇನು,

ಉ) ಈ ಭಾಗದಲ್ಲಿ ವಿಮಾನ ನಿಲ್ದಾಣಕ್ಕೆಂದು ರೈತರಿಂದ ಸಾವಿರಾರು ಎಕರೆ ಜಮೀನು ಸ್ವಾಧೀನ ಪಡೆಸಿಕೊಳ್ಳುವುದನ್ನು ಕೈಬಿಟ್ಟು ಈ ಜಮೀನನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪಕ್ಕದಲ್ಲಿರುವ ಜಮೀನು 408 ಎಕರೆ 33 ಗುಂಟೆ ಪೈಕಿ 53 ಎಕರೆ ಜಮೀನನ್ನು ರಾಜ್ಯ ಸರ್ಕಾರ/ಕೇಂದ್ರ ಸರ್ಕಾರಿ ಸಂಸ್ಥೆಗಳಿಗೆ ಮಾರುಕಟ್ಟೆ ಬೆಲೆಯಲ್ಲಿ ಹಂಚಿಕೆ ಮಾಡಲು ಹಾಗೂ ಉಳಿದ ಜಮೀನನ್ನು ಹಂತ ಹಂತವಾಗಿ ಹರಾಜಿನ ಮೂಲಕ ಹಂಚಿಕೆ ಮಾಡಲು ತೀರ್ಮಾನಿಸಿಲಾಗಿದೆ

ಆ) ಸುಮಾರು 270 ಎಕರೆ

ಇ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇ ದಿಕ್ಕನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದವರ ನಿರ್ದೇಶನದ ಮೇರೆಗೆ ಬದಲಾಯಿಸಿರುವ ಹಿನ್ನೆಲೆಯಲ್ಲಿ ಈ ಜಮೀನನ್ನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ ಸಂಸ್ಥೆಗೆ ಅಗತ್ಯವಿರುವುದಿಲ್ಲ

ಈ) ಮೇಲೆ ಹೇಳಿದ ಜಮೀನಿನ ಕೆಲವು ಭಾಗಗಳನ್ನು ವಿಮಾನ ನಿಲ್ದಾಣದ ಅವಶ್ಯ ಸೇವೆಗೆ ಹಾಗೂ ವಿಮಾನ ಹಾರಾಟ ಕಾರ್ಯಾಚರಣೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಗುರುತಿಸಲಾಗಿದೆ ಆದಾಗ್ಯೂ ವಿಮಾನಯಾನ ವಲಯಕ್ಕೆ ಈ ದೊರೆತಿರುವ ಪ್ರಾಮುಖ್ಯತೆ ಮತ್ತು ತೀವ್ರ ಅಭಿವೃದ್ಧಿಯಿಂದ ಏರೋಸ್ಪೇಸ್ ಕೈಗಾರಿಕೆಗಳಿಗೆ ಹೆಚ್ಚಿನ ಬೇಡಿಕೆ ಇದೆ ಆದ್ದರಿಂದ ಏರೋಸ್ಪೇಸ್ ಕೈಗಾರಿಕೆ ಘಟಕಗಳು ಹಾಗೂ ಈ ಸಂಬಂಧಿತ ಭಾರಿ ತಾಂತ್ರಿಕ ಘಟಕಗಳಿಗೆ ಸ್ಥಳ ನೀಡಲು ಏರೋಸ್ಪೇಸ್ ಪಾರ್ಕನ್ನು ಪ್ರತ್ಯೇಕವಾಗಿ ಸೃಜಿಸಲು ಪ್ರಸ್ತಾಪಿಸಿದೆ

ಉ) ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಈಗಾಗಲೇ ಅಗತ್ಯ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುವುದರಿಂದ ಪುನಃ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ವಿಷಯ ಉದ್ಭವಿಸುವುದಿಲ್ಲ

1506 (1826) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) – ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದಿಂದ ಎರಡು ಬಾರಿ ಡೀಸೆಲ್ ದರವನ್ನು ಇಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ರಾಜ್ಯ ರಸ್ತೆ ಸಾರಿಗೆ ಬಸ್ ಪ್ರಯಾಣ ದರಗಳನ್ನು ಇಳಿಸದೇ ಇರಿಸಲು ಕಾರಣಗಳೇನು,

ಇ) ಡೀಸಲ್ ಬೆಲೆ ಏರಿಕೆ ಆಧಾರದ ಮೇಲೆ ಹಿಂದೆ ಬಸ್ ಪ್ರಯಾಣ ದರಗಳನ್ನು ಏರಿಸಿರುವುದರಿಂದ, ಡೀಸಲ್ ಬೆಲೆ ಇಳಿದಿರುವುದರಿಂದ, ಡೀಸೆಲ್ ಬೆಲೆ ಇಳಿದಿರುವುದರಿಂದ, ಸರ್ಕಾರ ಬಸ್ ಪ್ರಯಾಣ ದರಗಳನ್ನು ಇಳಿಸಲು ಕ್ರಮ ಕೈಗೊಳ್ಳುತ್ತದೆಯೇ,

ಈ) ಹಾಗಿದ್ದಲಿ, ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ